ಹೇಳಿದ್ರು 'ನಾನಿರ್ತೀನಿ. ಯಾರೂ ಚಿಂತಿಸಬೇಡಿ. ಅವಳ ಬಾಯಿ ದೊಡ್ಡದು ಅಷ್ಟೆ. ಆದರೆ ತೊಂದರೆ ಏನೂ ಇಲ್ಲ' ಅಂತ. ಅಜ್ಜಿ ಹೇಳಿದ್ದಳು, 'ಯಾಕ್ರೀ ಯೋಚಿಸ್ತೀರ. ಯಾವ ಯಾವ ಋಣ ಹೇಗೆ ಹೇಗೆ ತೀರಿಸಬೇಕೋ ಅದು ಹಾಗೇ ಆಗಲಿ ಬಿಟ್ಟು ಬಿಡಿ' ಅಂತ. ನಂತರ ಹೇಳಿದಳು, 'ನೋಡು ಎರಡು ಸರ ಹೇಗೆ ಗಂಟುಹಾಕಿಕೊಂಡು ಬಿಟ್ಟವು ಅಂತ. ಇನ್ನು ಇದನ್ನ ಬಿಡಿಸೋದೇ ಕೆಲಸ ಆಗಿಬಿಡುತ್ತೆ. ಬಂಗಾರದ ಬೆಲೆ ಎಲ್ಲರಿಗೂ ಗೊತ್ತಾಗುತ್ತೆ. ಆದರೆ ರುದ್ರಾಕ್ಷಿದು ಮಾತ್ರ ತಿಳಿಯೋಕೇ ಆಗಲ್ಲ' ಅಂತ. ನಾನಂತೂ ಜೋರಾಗೇ ಅತ್ತು ಬಿಟ್ಟಿದ್ದೆ. ಅಮ್ಮ ಹೇಳಿದಳು, 'ನಿನ್ನ ಶೇಷಜ್ಜಿ ಏನೂ ಕಾಡಲ್ಲಿ ಇರಲ್ಲ. ಸುಮ್ಮನೆ ಹೊರಡು' ಅಂತ. 'ನಿನಗಿಂತ ಕಾಡಾದರೂ ವಾಸಿ' ಅಂತ ಮನಸ್ಸಿನಲ್ಲೇ ಅಂದುಕೊಂಡಿದ್ದೆ.

ಯೋಚನೆಯಲ್ಲೇ ಕಳೆದ ನನಗೆ 'ಪ್ಯಾಸೆಂಜರ್ಸ್ ಆರ್ ರಿಕ್ವೆಸ್ಟೆಡ್ ಟು...' ಕೇಳುತ್ತಿದ್ದಂತೆಯೇ ಎಚ್ಚರ ಆಯ್ತು. ಪುಟ್ಟೀನ ಎಬ್ಬಿಸಿದೆ. ಲಗೇಜ್ ಬ್ಯಾಗ್ ತೆಗೆದುಕೊಂಡು ಹೊರಗೆ ಬಂದಾಗ ಅಪ್ಪ ಅಲ್ಲೇ ಹೊರಗೆ ನಿಂತಿದ್ದರು. ನಾನು ಕೈ ಬೀಸಿದೆ. ಪುಟ್ಟಿ ಓಡಿದಳು ಅಪ್ಪನ ಹತ್ತಿರ. ನಾನು 'ಅಪ್ಪಾ...' ಎಂದು ಕೇಳುವ ಮೊದಲೇ 'ಎಲ್ಲಾ ಮುಗೀತು' ಅಂದರು. ನಾನು ಅಲ್ಲೇ ಕುಸಿದು ಕುಳಿತು ಬಿಟ್ಟೆ. ಅಪ್ಪ ಕಾರಿನಲ್ಲಿ ಮನೆಗೆ ಹೋಗುವಾಗ ಹೇಳಿದರು, 'ನಾಲ್ಕು ದಿನದಿಂದ ಜ್ವರ ಅಂತ ಮುದುಕಿ ಮಲಗಿತ್ತು. ಔಷಧಿ ಬೇಡ, ಡಾಕ್ಟರ್ ಬೇಡ ಅಂತ ಹಟ. ನಿನ್ನತ್ತಿಗೆ ನಿನ್ನೆ ಬಂದಳು. ಇವತ್ತು ಎಬ್ಬಿಸೋಣ ಅಂತ ಹೋದರೆ ಇಲ್ಲವೇ ಇಲ್ಲ. ನೀನು ಗಾಬರಿ ಆಗ್ತೀಯ ಅಂತ ಹುಷಾರಿಲ್ಲ ಅಂತ ಹೇಳಿದೆವು ಅಷ್ಟೆ.' ನನ್ನ ಕಾಲುಗಳು ಕುಳಿತಲ್ಲೇ ನಡುಗತೊಡಗಿದವು. ಮನೆಗೆ ಅಳುತ್ತಲೇ ಹೋದೆ. ಅಜ್ಜಿನ ಹೊರಗೆ ಮಲಗಿಸಿದ್ದರು. ಅಮ್ಮ ಮುಸಿ ಮುಸಿ ಅಳುತ್ತಲೇ, 'ಲೀಲಾ ನೋಡು ಇನ್ನೆಲ್ಲಿಯ ಶೇಷಜ್ಜಿ... ಹೇಗೆ ಮಲಗಿಬಿಟ್ಟಳು ನೋಡು' ಅಂತ ಜೋರಾಗಿ ಅಳತೊಡಗಿದಾಗ ನನಗೆ ಆಶ್ಚರ್ಯ, ಜಿಗುಪ್ಸೆ ಎರಡೂ ಆಗಿಬಿಟ್ಟಿತು. ಮಾತಾಡದೇ ಅಮ್ಮನನ್ನು ಕೊಡವಿ ಅತ್ತಿಗೆಯ ಬಳಿಗೆ ಹೋದೆ. ಇವರಿಗೆ ಫೋನ್ ಮಾಡಿದೆ. ರಾತ್ರಿ 12 ಗಂಟೆ ಫ್ಲೈಟ್‌ನಲ್ಲಿ ಹೊರಟು ಬರ್ತೀನಿ ಅಂದರು.

ಸಮಸ್ಯೆ ಬಂದದ್ದು ಅವರಿಗೆ ಯಾರು ಬೆಂಕಿ ಕೊಡಬೇಕು ಅಂತ. ಅಣ್ಣ ನಾನು ಕೊಡ್ತೀನಿ ಅಂದ. ಅಮ್ಮ ಬಿಡಲಿಲ್ಲ, 'ನಾವಿಬ್ಬರೂ ಬದುಕಿರುವಾಗ ನಿನಗೆಷ್ಟು ಧೈರ್ಯ' ಅಂದರು. ಅಪ್ಪ ಹೇಳಿದರು, 'ನನಗೆ ದೋಷ ಇಲ್ಲ. ನಾನು ಕೊಡ್ತೀನಿ' ಅಂತ. 'ನಿಮಗೇನು ಹುಚ್ಚೇ, ಬಂಧು ಅಲ್ಲ ಬಳಗ ಅಲ್ಲ. ಸಿಕ್ಕ ಸಿಕ್ಕವರಿಗೆಲ್ಲ ನೀವು ತಲೆ ಬೋಳಿಸಿಕೊಳ್ಳಬೇಕ' ಅಂದರು. ಇವಳೇನಾ ನಾನು ಬಂದಾಗ ಅಳುತ್ತಿದ್ದವಳು ಅಂತ ಅನ್ನಿಸಿತು. ಅತ್ತಿಗೆ, 'ನಾನೇ ಕೊಡುತ್ತೀನಿ. ನನಗೆ ತಾನೇ ಅತ್ತೆ ಅವರು...' ಅಂದಳು. 'ನಮ್ಮ ಮನೆಗೆ ಬಂದ ಹೆಣ್ಣು ಹೀಗೆಲ್ಲ ಮಾತಾಡೋದೇ' ಅಂದಳು ಅಮ್ಮ. ಅಜ್ಜಿಯ ಅಣ್ಣಂದಿರಲ್ಲಿ ಆಗಲೇ ಇಬ್ಬರು ಇರಲಿಲ್ಲ. ಮತ್ತೊಬ್ಬರಿಗೆ ತೀವ್ರ ಅನಾರೋಗ್ಯ ಸಮಸ್ಯೆ. ಅವರಿಗೆ ಬರಲಾಗಿರಲಿಲ್ಲ. ವಿಷಯ ಅಂತೂ ತಿಳಿಸಿದ್ದಾಯಿತು. ನಾನು ಅಂದುಕೊಂಡೆ... ಅಜ್ಜೀ ನೀನು ಬದುಕಿದ್ದಾಗಲೂ ನಿಮಗೆ ಸಮಸ್ಯೆ... ಈಗಲು ಕೂಡ ಹಾಗೇ ಅಲ್ವ ಅಂತ. ಅಜ್ಜಿ 'ಎಲ್ಲ ಋಣ ಕಣೆ' ಅಂದಂತಾಯ್ತು. ಬೆಳಿಗ್ಗೆಯೇ ಇವರು ಬಂದರು. ನಾನು ಸೂಕ್ಷ್ಮವಾಗಿ ಇವರಿಗೆ ವಿಷಯ ತಿಳಿಸಿದೆ. ಇವರು ನೇರವಾಗಿ ಬಚ್ಚಲಿಗೆ ಹೋಗಿ ತಲೆಮೇಲೆ ನೀರುಸುರಿದುಕೊಂಡು ಒದ್ದೆ ಪಂಚೆ ಉಟ್ಟು ಬಂದರು. ಅಮ್ಮ ಹೇಳಿದಳು 'ನೀವು... ನೀವು ಹೇಗೆ ಕೊಡ್ತೀರ. ಇದು ಸಾಧ್ಯವೇ?' ಅಂತ. 'ಯಾರದೋ ಮನೆಯನ್ನು ತನ್ನದು ಅಂತ ತಿಳಿದೇ ಬದುಕಿದ ಹೆಣ್ಣು ಜೀವ ಇದು. ಈಗ ಅವಳನ್ನ ನಾವು ಅನಾಥೆ ಎಂದು ಬಿಟ್ಟು ಬಿಟ್ಟರೆ ಅಪರಾಧ ಆಗಿಬಿಡುತ್ತೆ' ಅಂದು ಇವರು ತಿರುಗಿ